ಸಂಖ್ಯೆ: ಇಡಿ/ಕೆಇಎ/ಸಿಆರ್ 12/ನೀಟ್ ಎಂಡಿ ಎಂಎಸ್/2026 ದಿನಾಂಕ: 14–11–2026

ಪಿಜಿಇಟಿ – 2026 ಸ್ನಾತಕೋತ್ತರ ವೈದ್ಯಕೀಯ ಸೀಟು ಹಂಚಿಕೆ – ಮಾಹಿತಿ

2026-27 ನೇ ಸಾಲಿನ ಪಿಜಿ ವೈದ್ಯಕೀಯ ಕೋರ್ಸಗಳ ಪ್ರವೇಶಾತಿಗೆ ಕೌನ್ಸಿಲಿಂಗ್ ಪ್ರಕ್ರಿಯೆಗೆ ಸಂಬಂಧಿಸಿದಂತೆ, ವೈದ್ಯಕೀಯ ಶಿಕ್ಷಣ ಇಲಾಖೆಯ ಪತ್ರ ಎಂಇಡಿ 432 ಆರ್ ಜಿ ಯು 2026 ದಿನಾಂಕ 05–11–2026 ರಲ್ಲಿನ ನಿರ್ದೇಶನದಂತೆ ಪಿಜಿ ವೈದ್ಯಕೀಯ ಸೇವಾ ನಿರತ ವೈದ್ಯರಿಗೆ ಮೀಸಲಾದ ಸೀಟುಗಳನ್ನು ಅರ್ಹ ಸೇವಾ ನಿರತ ಅಭ್ಯರ್ಥಿಗಳಿಗೆ ನಡೆಸಬಹುದಾದ ಮಾಪ್ – ಅಪ್ ಸುತ್ತಿನ ಸೀಟು ಹಂಚಿಕೆಯ ನಂತರ ಉಳಿಯುವ ಸೇವಾ ನಿರತ ಸೀಟುಗಳನ್ನು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದವರು ಪರಿವರ್ತಿಸಿ ನೀಡುವ ಸೀಟ್ ಮ್ಯಾಟ್ರಿಕ್ಸ್ ನಂತೆ ಸೇವಾ ನಿರತರಲ್ಲದ ಅಭ್ಯರ್ಥಿಗಳಿಗೆ ನಡೆಸುವ ಮಾಪ್ ಅಪ್ ಸುತ್ತಿನ ಸೀಟು ಹಂಚಿಕೆಯಲ್ಲಿ ಹಂಚಿಕೆಗೆ ಪರಿಗಣಿಸಲಾಗುವುದು.

PGET 2026 - PG NEET– MD MS Counselling – Information

Pursuant to the Medical Education Department direction in letter no. **MED 432 RGU 2026 dated 05-11-2026** with regard to PG Medical counselling for the year 2026-27, any seats reserved for in-service candidates that would remain vacant after completion of mop-up round for eligible in-service candidates, shall be made available to non-in-service candidates during the mop-up round as per the de-categorised seat matrix of the Directorate of Medical Education.

Executive Director.

Note: The said above mentioned Government letter is hosted on the KEA Website.

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583 Helpline : 080 - 23 460 460.
e-mail : keauthority-ka@nic.in Website : http://kea.kar.nic.in

ಕರ್ನಾಟಕ ಸರ್ಕಾರ

ಸಂಖ್ಯೆ: ಎಂಇಡಿ 432 ಆರ್‌ಜಿಯು 2026

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಡಾ.ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 05-11-2026.

ಇಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ವೈದ್ಯಕೀಯ ಶಿಕ್ಷಣ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಇವರಿಗೆ:
ಕಾರ್ಯನಿರ್ವಾಹಕ, ನಿರ್ದೇಶಕರು,
ಕರ್ನಾಟಕ ಪರೀಕ್ಷಾ ಪ್ರಾಧಿಕಾರ,
ಸಂಪಿಗೆ ರಸ್ತೆ, 18ನೇ ಅಡ್ಡ ರಸ್ತೆ,
ಮಲ್ಲೇಶ್ವರಂ ಬೆಂಗಳೂರು.

ಮಾನ್ಯರೆ,

ವಿಷಯ: 2026-27ನೇ ಸಾಲಿನ ಸ್ನಾತಕೋತ್ತರ ವೈದ್ಯಕೀಯ (PG Medical) ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆಯಲ್ಲಿ ಸೇವಾನಿರತ ವೈದ್ಯರಿಗೆ ಮೀಸಲಿರಿಸಿದ ಸೀಟುಗಳನ್ನು ಎರಡನೇ ಸುತ್ತಿನ ಕೌನ್ಸೆಲಿಂಗ್‌ನಲ್ಲಿ ಸಾಮಾನ್ಯ ಸೀಟುಗಳಾಗಿ ಪರಿವರ್ತಿಸದೇ, Mop-up Round ಪೂರ್ಣಗೊಳ್ಳುವವರೆಗೆ ಕಾಯ್ದಿರಿಸುವ ಬಗ್ಗೆ..

ಉಲ್ಲೇಖ: ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದಿಂದ ಸ್ವೀಕೃತವಾಗಿರುವ ಕಡತ ಸಂಖ್ಯೆ:DME/16/2026(2322521)

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಏಕ ಕಡತದಲ್ಲಿ ಸಲ್ಲಿಸಲಾದ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, 2026-27ನೇ ಸಾಲಿನ ಸ್ನಾತಕೋತ್ತರ ವೈದ್ಯಕೀಯ (PG Medical) ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆಯಲ್ಲಿ ಸೇವಾನಿರತ ವೈದ್ಯರಿಗೆ ಮೀಸಲಿರಿಸಿದ ಸೀಟುಗಳನ್ನು ಎರಡನೇ ಸುತ್ತಿನ ಕೌನ್ಸೆಲಿಂಗ್‌ನಲ್ಲಿ ಸಾಮಾನ್ಯ ಸೀಟುಗಳಾಗಿ ಪರಿವರ್ತಿಸದೇ, Mop-up Round ಪೂರ್ಣಗೊಳ್ಳುವವರೆಗೆ ಕಾಯ್ದಿರಿಸುವ ಬಗ್ಗೆ ಅಗತ್ಯ ಕ್ರಮವಹಿಸುವಂತೆ ತಮ್ಮನ್ನು ಕೋರಲು ನಿರ್ದೇಶಿನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಬಿ.ಎನ್. ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ-3,
ವೈದ್ಯಕೀಯ ಶಿಕ್ಷಣ ಇಲಾಖೆ.

ಪ್ರತಿ: ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.